ಇ) ಖಾಲಿ ಇರುವ ಹುದ್ದೆಗಳ ಸಂಖ್ಯೆಯೆಷ್ಟು;

ಈ) ಈ ಹುದ್ದೆಗಳನ್ನು ತುಂಬಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀಮತಿ ನಫೀಜ ಫಜಲ್ (ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ರಾಜ್ಯ ಸಚಿವರು) :

ಅ) ಒಟ್ಟು ಆಸ್ಪತ್ರೆಗಳು : 04

ಆ) ಮಂಜೂರಾದ ಸಿಬ್ಬಂದಿ ವಿವರ ಕೆಳಕಂಡಂತಿದೆ :

1)	ವೈದ್ಯರು	: 06
2)	ಶುಶ್ರೂಷಕಿಯರು	: 06
3)	ಔಷಧಿ ವಿತರಕರು	: 05
4)	ದ್ವಿತೀಯ ದರ್ಜೆ ಸಹಾಯಕರು	: 02
5)	ಬೆರಳಚ್ಚುಗಾರರು	: 01
6)	ಗ್ರೂಪ್-ಡಿ-ನೌಕರರು	: 09
7)	ಕುಕ್ (ಅಡಿಗೆಯವರು)	: 01
ಒಟ್ಟು ಮಂಜೂರಾದ ಹುದ್ದೆಗಳು		: 30

ಇ) ಖಾಲಿ ಇರುವ ಹುದ್ದೆಗಳ ವಿವರ ಕೆಳಕಂಡಂತಿದೆ :

1)	ವೈದ್ಯರು	: 01
2)	ಶುಶ್ರೂಷಕಿಯರು	: 04
3)	ಔಷಧಿ ವಿತರಕರು	: 01
4)	ಬೆರಳಚ್ಚುಗಾರರು	: 01
5)	ಗ್ರೂಪ್-ಡಿ-ನೌಕರರು	: 04
ಒಟ್ಟು ಮಂಜೂರಾದ ಹುದ್ದೆಗಳು		: 11

ಈ) ಇಲಾಖೆಯಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ವಿಶೇಷ ನೇಮಕಾತಿ ಅಧಿಸೂಚನೆಯ ಸಂಖ್ಯೆ : ಡಿಪಿಎಆರ್ : 89 : ಎಸ್ಆರ್‌ಡಿ : 2001, ದಿನಾಂಕ : 29-5-2002 ರೀತ್ಯ ಭರ್ತಿ ಮಾಡಿಕೊಳ್ಳಲು ಸರ್ಕಾರವು ಕ್ರಮ ಕೈಗೊಳ್ಳುತ್ತಿದೆ. ಉಳಿದ ಕೊರತೆಯಿರುವ ವೈದ್ಯಕೀಯ ಸಿಬ್ಬಂದಿ ಹುದ್ದೆಗಳಾದ ಶುಶ್ರೂಷಕಿಯರು ಹಾಗೂ ಔಷಧಿ ವಿತರಕರು ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳನ್ನು ತರಬೇತಿಗೆ ಆಯ್ಕೆ ಮಾಡಿ ತರಬೇತಿ ಗೊಳಿಸಲು ತರಬೇತಿ ನಿಯಮ ಮತ್ತು ಪಠ್ಯ ಕ್ರಮಗಳನ್ನು ಪರಿಷ್ಕರಣೆ ಮಾಡಲಾಗುತ್ತಿದೆ. ಗ್ರೂಪ್-ಡಿ- ಹುದ್ದೆಗಳನ್ನು ಸಕ್ರಮಗೊಳಿಸಲಾಗಿರುವ ದಿನಗೂಲಿ ನೌಕರರಿಂದ ಭರ್ತಿ ಮಾಡಲು ಸರ್ಕಾರದ ಆದೇಶ ದಿನಾಂಕ:23-11-95 ರ ಪ್ರಕಾರ ಆಯಾ ಜಿಲ್ಲಾಧಿಕಾರಿಗಳನ್ನು ಕೋರಲಾಗಿದೆ. ಈಗಾಗಲೇ ಈ ಹಿಂದೆ ಹಲವು ಹುದ್ದೆಗಳನ್ನು ಈ ಮೂಲಕ ಭರ್ತಿ ಮಾಡಲಾಗಿದೆ.

ಸೇಡಂ ತಾಲ್ಲೂಕಿನ ತೆಲಂಗಾಣ ಗಡಿಯಾಚಿನಲ್ಲಿರುವ ನಾಡೇಪಲ್ಲಿ ಗ್ರಾಮದ ಉಸ್ಕುಬಾವಿ ಹೊಳೆತ್ತುವುದು.

1170 (998) ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ತೆಲಂಗಾಣ ಗಡೀಯಂಚಿನಲ್ಲಿರುವ ನಾಡೇಪಲ್ಲಿ ಗ್ರಾಮದ ಉಸ್ಕುಬಾವಿ ಹೂಳೆತ್ತಿ ದುರಸ್ತಿಯಾದರೆ ಸುಮಾರು 50-60 ಎಕರೆಗಿಂತ ಹೆಚ್ಚು ನೀರಾವರಿಯಾಗುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು;

ಇ) ಈಗಲಾದರೂ ಸಹ ಇದೇ ವರ್ಷ 2002-03ರಲ್ಲಿ ತೆಲಂಗಾಣ ಗಡಿಯಂಚಿನಲ್ಲಿರುವ ನಾಡೇಪಲ್ಲಿ ರೈತರಿಗೆ ಇದರ ದುರಸ್ತಿ ಮಾಡಿಸಿ ನೀರಾವರಿಗಾಗಿ ಅನುಕೂಲ ಮಾಡಿಕೊಡಬಹದೇ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಬಂದಿದೆ.

ಆ) ಈ ಕಾಮಗಾರಿಯನ್ನು 2002-03ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಸೇರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಇ) 2002-03ನೇ ಸಾಲಿನ ಅನುದಾನದಲ್ಲಿ ಕಾಮಗಾರಿಯನ್ನು ತೆಗೆದುಕೊಂಡು ನಾಡೇಪಲ್ಲಿ ಗ್ರಾಮದ ರೈತರ ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸಿ ಕ್ರಮ ಕೈಗೊಳ್ಳಲಾಗುವುದು.

ಸೇಡಂ ತಾಲ್ಲೂಕಿನ ಲಿಂಗಂಪಲ್ಲಿ ಪಂಚಾಯತಿಯಲ್ಲಿ ಹಣದ ಅವ್ಯವಹಾರ

1171 (1367) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಲಿಂಗಂಪಲ್ಲಿ ಗ್ರಾಮ ಪಂಚಾಯತಿಯಲ್ಲಿ ಅವ್ಯವಹಾರವಾಗಿದ್ದು, ನಿಜವಲ್ಲವೆ; ಆಗಿದ್ದರೆ ಆ ಹಣದ ಮೊತ್ತ ಎಷ್ಟು;

ಆ) ಹಾಗಿದ್ದಲ್ಲಿ, ಹಣ ದುರುಪಯೋಗ ಮಾಡಿದವರು ಯಾರು, ಅವರ ಮೇಲೆ ಕೈಗೊಂಡಿರುವ ಕ್ರಮವೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಸೇಡಂ ತಾಲ್ಲೂಕಿನ ಲಿಂಗಂಪಲ್ಲಿ ಗ್ರಾಮ ಪಂಚಾಯತಿಯಲ್ಲಿ ಯಾವ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಗುಲ್ಬರ್ಗಾ ಜಿಲ್ಲೆಯ ಪ್ರೌಢ ಶಾಲಾ ಕಟ್ಟಡಗಳ ನಿರ್ಮಾಣ

1172 (1368) ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆ ಎಲ್ಲಾ ರಂಗಗಳಲ್ಲಿ ಹಿಂದುಗಳಿದ ಪ್ರದೇಶವಾಗಿ ಶಿಕ್ಷಣ ರಂಗದಲ್ಲಿ ಸಹ ಹಿಂದುಳಿದು ಅದರಲ್ಲಿ ತೆಲಂಗಾಣ ಆಂಧ್ರ ಗಡೀಯಂಚಿನಲ್ಲಿರುವ ಸೇಡಂ ಕ್ಷೇತ್ರ ತೀರಾ ಹಿಂದುಗಳಿಂದ ಪ್ರದೇಶವಾಗಿರುವ ಈ ಭಾಗದಲ್ಲಿ ಪ್ರೌಢಶಾಲೆಗಳಿಗಾಗಿ ಕಟ್ಟಡಗಳು ಇಲ್ಲದೇ ತೊಂದರೆಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಈಗಲಾದರೂ ಸಹ ಈ ಕ್ಷೇತ್ರದಲ್ಲಿ ಪ್ರೌಢಶಾಲೆಗಳು ಇದ್ದು ಕಟ್ಟಡಗಳ ನಿರ್ಮಾಣ ಮಾಡುವ ಯೋಜನೆ ಸರ್ಕಾರದಲ್ಲಿದೆಯೇ : ಜಿಲ್ಲೆಯಲ್ಲಿ ಒಟ್ಟು ನಿರ್ಮಿಸಿರುವ ಪ್ರೌಢಶಾಲೆ ಕಟ್ಟಡಗಳು ಎಷ್ಟು? ಗ್ರಾಮವಾರು ವಿವರ ನೀಡುವುದು?